ಲೀಲಾ ಮುದ್ಗಲ್‌ರ ಮನೆಯಲ್ಲಿರುವುದು ನನಗೆ ಅಗ್ಗವಾಗಿತ್ತು. ನಾಲ್ಕು ಸಾವಿರ ಕ್ರೋನರ್‌ನಲ್ಲಿ ವಸತಿ–ಊಟ ಎಲ್ಲವೂ ಲಭ್ಯವಾಗುತ್ತಿತ್ತು.

ನನ್ನ ಎರಡನೆಯ ವಿಚ್ಛೇದನ ನಿರ್ಧಾರಿತ ಸಮಯದಲ್ಲಿ ಆರಂಭಗೊಂಡು, ನಿರ್ಧಾರಿತ ಸಮಯದಲ್ಲಿಯೇ ಮುಗಿದೂ ಹೋಯಿತು. ನಾನು ಅಸಹಾಯಕತೆಯ ದಾಂಪತ್ಯದಿಂದ ಮುಕ್ತಳಾಗಿದ್ದೆ. ನಾನು ನಲ್ವತ್ತರ ಹೊಸ್ತಿಲಿನಲ್ಲಿ ನಿಂತಿದ್ದೆ. ಜೀವನವಿನ್ನೂ ಮುಗಿದಿರಲಿಲ್ಲ. ನಾನು ಡೆನ್ಮಾರ್ಕ್‌ನಲ್ಲಿರುತ್ತಾ ಸುಮಾರು ಒಂಬತ್ತು ವರ್ಷಗಳಾಗಿದ್ದವು. ಮತ್ತೆ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಶಾಲೆಯ ಕೆಲವು ಸಹಕರ್ಮಿಗಳೊಂದಿಗೆ ಮಿತ್ರತ್ವದ ಸಂಬಂಧವಿತ್ತು. ಅವರನ್ನು ಭೇಟಿಯಾಗುತ್ತಿದ್ದೆ. ಒಮ್ಮೊಮ್ಮೆ ಅವರೊಂದಿಗೆ ಪ್ರವಾಸಕ್ಕೆ ಹೋಗುತ್ತಿದ್ದೆ. ಅಂದು ನನ್ನ ಸ್ನೇಹಿತೆ ಕ್ಯಾಥರೀನಾಳ ಮನೆಯಲ್ಲಿ ಪಾರ್ಟಿ ಇತ್ತು. ಅಲ್ಲಿ ಅವನು ನನಗೆ ಭೇಟಿಯಾದ.

'ಮೂರನೆಯ ಪತಿ?'

ನಾನು ನನ್ನ ಮೂರನೆಯ ಪತಿ ಮಾರ್ಕೋ ಬಗ್ಗೆ ಹೇಳುತ್ತಿದ್ದೇನೆ. ಹೌದು... ಕಾಲ ನನ್ನನ್ನು ದ್ರೌಪದಿಯ ಎರಡನೆಯ ಅವತಾರ ಮಾಡಿತು. ದ್ರೌಪದಿ ಅದೆಷ್ಟು ಯಾತನೆ ಮತ್ತು ನಿಂದನೆಯನ್ನು ಸಹಿಸಬೇಕಾಯಿತು ಎಂಬುದು ನನಗೆ ಚೆನ್ನಾಗಿ ಅರ್ಥವಾಗಿದೆ.

ನಾನು ಕ್ಯಾಥರೀನಾಳ ಮನೆಯನ್ನು ಹುಡುಕುತ್ತಿರುವಾಗ ನನ್ನ ದೃಷ್ಟಿ ಅವನ ಮೇಲೆ ಬಿತ್ತು. ಅವನು ಕ್ಯಾಥರೀನಾಳ ಬಿಲ್ಡಿಂಗ್ ಹೊರಗೆ ನಿಂತು ಅವಳ ಮನೆಯ ಕಾಲಿಂಗ್ ಬೆಲ್ ಒತ್ತುತ್ತಿದ್ದ.

'ನೀವು ಕ್ಯಾಥರೀನಾ ನೀಲಸನ್‌ರ ಮನೆಗೆ ಹೋಗುತ್ತಿದ್ದೀರ?' ನಾನು ಅವನನ್ನು ಕೇಳಿದೆ.

ಅವನು ಹೌದು ಎಂಬಂತೆ ತಲೆಯಾಡಿಸಿದ.

'ನಾನೂ ಅಲ್ಲಿಗೇ ಹೋಗ್ತಿದ್ದೇನೆ' ಎಂದೆ ನಾನು.

'ಓಹ್ ಐ ಸೀ! ಇಂಟರೆಸ್ಟಿಂಗ್'.

ಕ್ಯಾಥರೀನಾ ಇಂಟರ್‌ಕಾಮ್‌ನಿಂದ ಕೆಳಗಿದ್ದ ಬಿಲ್ಡಿಂಗ್‌ನ ಬಾಗಿಲನ್ನು ತೆರೆದಳು. ಅವಳು ಐದನೆಯ ಅಂತಸ್ತಿನಲ್ಲಿ ವಾಸಿಸುತ್ತಿದ್ದಳು. ನಾವು ಲಿಫ್ಟ್‌ನೆಡೆಗೆ ಹೋದೆವು. ನಾವು ಗಾಬರಿಯಿಂದ ಮೇಲೆ ಹೋಗುತ್ತಿದ್ದ ಲಿಫ್ಟ್‌ನಲ್ಲಿ ನಿಂತಿದ್ದೆವು, ಲಿಫ್ಟ್‌ನಲ್ಲಿ ನಾವಿಬ್ಬರು ಮಾತ್ರ ಇದ್ದೆವು. ಅವನು ಬಹುಶಃ ಅಸಹಜತೆಯನ್ನು ದೂರ ಮಾಡಲು ನನ್ನೆಡೆಗೆ ತನ್ನ ಕೈಯನ್ನು ಚಾಚಿದ, 'ಐ ಯಾಮ್ ಮಾರ್ಕೋ'.

'ಐ ಯಾಮ್ ನ್ಯಾನ್ಸಿ' ನಾನೂ ನನ್ನ ಹೆಸರನ್ನು ಹೇಳಿದೆ.

ನಾವಿಬ್ಬರು ಲಿಫ್ಟ್‌ನಿಂದ ಹೊರ ಬಂದು ಒಟ್ಟಿಗೆ ಕ್ಯಾಥರೀನಾಳ ಫ್ಲ್ಯಾಟ್‌ಗೆ ಹೋದೆವು. ಕ್ಯಾಥರೀನಾ ನಾವಿಬ್ಬರು ಒಟ್ಟಿಗೆ ನಿಂತಿರುವುದನ್ನು ನೋಡಿ ಆಶ್ಚರ್ಯಗೊಂಡಳು.

'ನೀವಿಬ್ಬರು ಈ ಮೊದಲಿನಿಂದಲೇ ಪರಿಚಿತರೇ?' – ಕ್ಯಾಥರೀನಾ ಇಬ್ಬರನ್ನೂ ನೋಡುತ್ತಾ ಕೇಳಿದಳು.

'ಇಲ್ಲ, ನಾವಿಬ್ಬರು ಈಗ ತಾನೇ ಗ್ರೌಂಡಿನಲ್ಲಿ ಭೇಟಿಯಾದೆವು' ನಾನು ಹೇಳಿದೆ.

'ಓಹೋ, ನೀವು ಗ್ರೌಂಡಿನಲ್ಲಿಯೇ ಭೇಟಿಯಾಗಿದ್ದೀರ! ಇನ್ನು ನಾನು ಪರಿಚಯ ಮಾಡಿಸಬೇಕಾದ ಅಗತ್ಯವಿಲ್ಲ' ಕ್ಯಾಥರೀನಾ ನಗುತ್ತಾ, ನಮ್ಮಿಬ್ಬರ ಕೈಕುಲುಕಿ ನಮ್ಮನ್ನು ಒಳಗೆ ಕರೆದುಕೊಂಡು ಹೋದಳು.

'ಈಗ ನಮಗೆ ನಮ್ಮಿಬ್ಬರ ಹೆಸರು ಮಾತ್ರ ಗೊತ್ತಿದೆ' ಮಾರ್ಕೋ ನನ್ನನ್ನು ನೋಡುತ್ತಾ ಹೇಳಿದ.

'ಓಕೆ, ಉಳಿದ ಪರಿಚಯವನ್ನು ನಾನು ಹೇಳ್ತೀನಿ' ಕ್ಯಾಥರೀನಾ ಹಾವಭಾವದಿಂದ ಹೇಳಿದಳು, 'ಮಾರ್ಕೋ, ನ್ಯಾನ್ಸಿ ಇಂಡಿಯಾದಿಂದ ಬಂದವಳು. ನಮ್ಮ ಶಾಲೆಯಲ್ಲಿ ಕಂಪ್ಯೂಟರ್ ಮತ್ತು ಬಯಾಲಜಿ ಟೀಚರ್ ಆಗಿದ್ದಾಳೆ; ನ್ಯಾನ್ಸಿ, ಮಾರ್ಕೋ ಫ್ರೆಂಚ್‌ನವರು. ನನ್ನ ಪತಿ ಕಿಮ್ ಅವರ ಆಫೀಸಿನಲ್ಲಿ ಐಟಿ ಪ್ರೊಫೆಶನಲ್ ಆಗಿದ್ದಾರೆ.'

ನಾವು ಮತ್ತೊಮ್ಮೆ ಒಬ್ಬರಿಗೊಬ್ಬರು 'ಹಾಯ್' ಎಂದು ಮುಗುಳ್ನಕ್ಕೆವು.

ಮಾರ್ಕೋ ಫ್ರೆಂಚ್ ಪ್ರಜೆಯಾಗಿದ್ದು, ಕ್ಯಾಥರೀನಾಳ ಪತಿಯ ಸಹಕರ್ಮಿಯಾಗಿದ್ದ. ಅವನು ಮೊದಲ ಭೇಟಿಯಲ್ಲಿಯೇ ನನ್ನಲ್ಲಿ ಆಸಕ್ತಿ ಹುಟ್ಟಿಸಿದ್ದ. ತನ್ನ ಸಹಕರ್ಮಿ ಕಿಮ್‌ರೊಂದಿಗೆ ಕಲೆತು ವಿಭಿನ್ನ ರುಚಿಗಳ ಕಾಕ್‌ಟೇಲ್ ಡ್ರಿಂಕ್ಸ್‌ಗಳನ್ನು ತಯಾರಿಸಿದ. ನಾನು ಹೆಚ್ಚು ಕುಡಿಯುವುದಿಲ್ಲ ಎಂದಾಗ ಅವನು ನನಗೆ ಬೀರ್ ಫ್ಲೇವರ್‌ನಲ್ಲಿ ಲೆಮನ್ ಜ್ಯೂಸ್, ಆರೇಂಜ್ ಜ್ಯೂಸ್ ಮತ್ತು ಪುದೀನಾ ಮಿಶ್ರಣದ ಸಾದಾ ಡ್ರಿಂಕ್ಸ್ ಮಾಡಿ ತಂದ. ನಂತರ ತನಗೆ ಬೇಕಾದ ಡ್ರಿಂಕ್ಸ್‌ಗಳನ್ನು ಮಾಡಿಕೊಂಡು ನನ್ನ ಜೊತೆಯಲ್ಲಿ ಕೂತು ಕುಡಿಯಲಾರಂಭಿಸಿದ. ನಾನು ಮೂವತ್ತೆಂಟನೆಯ ವರ್ಷಕ್ಕೆ ಕಾಲಿಟ್ಟಿದ್ದೆ. ಅವನು ಮೂವತ್ತೆರಡನೆಯ ವಯಸ್ಸಿನವನಾಗಿದ್ದ. ಅವನೊಂದಿಗೆ ಮಾತನಾಡುವಾಗ, ನಾವಿಬ್ಬರು ಬಹಳ ಹಳೆಯ ಸ್ನೇಹಿತರು, ನಮ್ಮಿಬ್ಬರ ಭೇಟಿಯಾಗದೆ ತುಂಬಾ ದಿನಗಳಾದವು ಎಂದು ಅನ್ನಿಸುತ್ತಿತ್ತು. ನಮ್ಮಿಬ್ಬರನ್ನು ನೋಡಿ ಯಾರೂ ಸಹ, ನಾವು ಇದೀಗ ತಾನೇ ಭೇಟಿಯಾಗಿದ್ದೇವೆ ಎಂದು ಹೇಳಲಾರರು. ನಾವಿಬ್ಬರು ಸಹ ಒಬ್ಬರು ಮತ್ತೊಬ್ಬರೊಂದಿಗೆ ಸಹಜವಾಗಿಯೇ ಇದ್ದೇವೆ ಎಂದು ಮನಗಾಣುತ್ತಿದ್ದೆವು.

ಆ ಮೊದಲ ಭೇಟಿಯಲ್ಲಿಯೇ ನನಗೆ, ನಾನೊಬ್ಬ ಒಳ್ಳೆಯ ಮಿತ್ರನನ್ನು ಪಡೆದೆ ಎಂದು ಅನ್ನಿಸಿತು. ನನ್ನ ಪೂರ್ಣ ಹೆಸರು ಮಾರ್ಕೋ ಜೋಲಿ ಲೆರಾಯ್, ಜೋಲಿ ನನ್ನ ತಾಯಿಯ ಸರ್‌ನೇಮ್, ಲೆರಾಯ್ ತಂದೆಯ ಸರ್‌ನೇಮ್ ಎಂದು ಹೇಳಿದ. ನಾನು ಸಹ ಅವನಿಗೆ, ನನ್ನ ಹೆಸರು ನ್ಯಾನ್ಸಿ ಕೋಶೀ ಮ್ಯಾಥ್ಯೂ, ನಾನು ಇಂಡಿಯನ್ ಕ್ರಿಶ್ಚಿಯನ್ ಎಂದು ಹೇಳಿದೆ.

'ಭಾರತೀಯ ಕ್ರೈಸ್ತರು ನಿಜವಾದ ಕ್ರೈಸ್ತರಾಗಿರುತ್ತಾರೆಯೇ?' ಅವನು ಕೇಳಿದ.

ನಾನು ಅವನ ಈ ಪ್ರಶ್ನೆಗೆ ಆಶ್ಚರ್ಯಗೊಂಡೆ, ಆದರೂ ಶಾಂತಿಯಿಂದ ಉತ್ತರಿಸಿದೆ, 'ನನಗೆ ತಿಳಿದಂತೆ ಯಾವ ಕ್ರೈಸ್ತ ಸಹ ಶುದ್ಧ ಕ್ರೈಸ್ತನಲ್ಲ. ಎಲ್ಲಾ ಕನ್ವರ್ಟೆಡ್ ಕ್ರಿಶ್ಚಿಯನ್ನರು. ಏಸು ಕ್ರಿಸ್ತರೇ ಖುದ್ದು ಓರ್ವ ಯಹೂದಿಯಾಗಿದ್ದು, ಇಸ್ರೇಲ್‌ನ ಹಳ್ಳಿ ಬೆಥಲೆಹೆಮ್‌ನಲ್ಲಿ ಜನಿಸಿದ್ದರು. ಕ್ರೈಸ್ತ ಪರಿವಾರದಲ್ಲಿ ಹುಟ್ಟಿದ್ದರಿಂದಲೇ ಯಾರೂ ಕ್ರೈಸ್ತರಾಗುವುದಿಲ್ಲ, ಯಾರು ಕ್ರಿಸ್ತನ ಉಪದೇಶವನ್ನು ಪಾಲಿಸುವರೋ ಅವರೇ ಕ್ರೈಸ್ತರು.'

ಮಾರ್ಕೋ ಮುಗುಳ್ನಕ್ಕ. ಬಹುಶಃ ಅವನಿಗೆ ನನ್ನ ಉತ್ತರ ಹಿಡಿಸಿತು; ನಾನು ಅವನ ಹೃದಯವನ್ನು ಸ್ಪರ್ಶಿಸಿದೆ. ಅಂದು ಸಂಜೆ ನಾವಿಬ್ಬರು ಪರಸ್ಪರ ಅತಿ ಸಮೀಪಕ್ಕೆ ಬಂದೆವು. ನಾವು ಒಬ್ಬರಿಗೊಬ್ಬರು ನಮ್ಮ ನಮ್ಮ ಅತೀತದ ಕಥೆಯನ್ನು ಮನಬಿಚ್ಚಿ ಹೇಳಿಕೊಂಡೆವು.

ಕೆಲವು ದಿನಗಳ ನಂತರ, ಅವನು ನನಗೆ ಫೋನ್ ಮಾಡಿ, ನಾನು ಸರ್ಫಿಂಗ್‌ಗೆ (ಸಮುದ್ರದಲ್ಲಾಡುವ ಮನರಂಜನೆಯ ಕ್ರಿಯೆ) ಹೋಗುತ್ತಿದ್ದೇನೆ, ನಿಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಲು ಬಯಸುತ್ತೇನೆ ಎಂದು ಫೋನ್ ಮಾಡಿ, 'ನಿಮಗೂ ನೀರಿನಲ್ಲಿರುವುದೆಂದರೆ ಇಷ್ಟ...!' ಎಂದು ಒತ್ತಾಯಿಸಿದ.

ನಾನು ಕೂಗಿ ಕೂಗಿ 'ಹೌದು' ಎಂದು ಹೇಳಲು ಬಯಸುತ್ತಿದ್ದೆ. ಆದರೆ ನಾನು ಇಷ್ಟು ಕಳವಳಗೊಳ್ಳಬಾರದು, ಸ್ವಲ್ಪ ತಾಳ್ಮೆಯಿಂದ ವರ್ತಿಸಬೇಕು ಎಂದು ನನಗೆ ಅನ್ನಿಸಿತು. ನಾನು ಇಪ್ಪತ್ತು ಇಪ್ಪತ್ತೆರಡರ ಹುಡುಗಿಯಲ್ಲ, ನಾನು ಮೂವತ್ತೆಂಟರ ಪರಿಪಕ್ವ ಮಹಿಳೆಯಾಗಿದ್ದೆ, ಎರಡು ವಿವಾಹಗಳ ಅಸಫಲ ಹೆಣ್ಣಾಗಿದ್ದೆ. ನಾನು ನೆಪ ಹೇಳಿದೆ, 'ಯೂ ಆರ್ ಎ ಕೂಲ್ ಗಯ್... ನಿಮ್ಮೊಂದಿಗೆ ಪ್ರವಾಸ ಮಾಡುವಲ್ಲಿ ಖುಷಿಯೇ ಆಗುತ್ತದೆ. ಆದರೆ... ನಾನು ಈ ಮೊದಲೇ ಒಂದು ಪ್ರೋಗ್ರಾಮ್ ಹಾಕಿಕೊಂಡಿದ್ದೇನೆ, ಅದನ್ನು ಕ್ಯಾನ್ಸಲ್ ಮಾಡಲಾರೆ... ಮುಂದೆದಾದರೂ ನೋಡೋಣ... ಥ್ಯಾಂಕ್ಸ್.'

ಅವನಿಗೆ ನಿರಾಸೆಯಾಯಿತು. ನನಗೂ ಸಾಕಷ್ಟು ದಿನ, ನಾನೇಕೆ ಅವನ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲವೆಂಬ ವಿಷಯ ಕಾಡಿತು. ಅವನು ಮತ್ತೆ ನನಗೆ ಫೋನ್ ಮಾಡಲಿಲ್ಲವೆಂಬುದು ಸ್ಪಷ್ಟ. ನಮ್ಮ ಸಂಪರ್ಕ ಗಟ್ಟಿಯಾಗುವುದಕ್ಕೆ ಮೊದಲೇ ಕಡಿದು ಹೋಯಿತು.

ನಾನು ಇಂಟರ್ನೆಟ್‌ನಲ್ಲಿ ಜೀವನಸಂಗಾತಿಯನ್ನು ಹುಡುಕಲಾರಂಭಿಸಿದೆ. ಎರಡು ಆನ್‌ಲೈನ್ ಡೇಟಿಂಗ್ ವೆಬ್‌ಸೈಟ್‌ಗಳಲ್ಲಿ ಸೇರಿಕೊಂಡೆ. ನನ್ನ ಪ್ರೊಫೈಲ್ ಸೆಟ್ ಮಾಡಿದೆ; ನನಗೆ ಆರ್ಥಿಕವಾಗಿ ಸದೃಢನಾಗಿರುವ, ಸದಾ ಸಹಕರಿಸುವ ಮತ್ತು ಭಾವನಾತ್ಮಕವಾಗಿ ಸ್ಥಿರವಾಗಿರುವ, ನಾನು ಮನಬಿಚ್ಚಿ ಮಾತನಾಡುವಂಥ, ನನ್ನನ್ನು ನಗಿಸುವಂಥ ಸಹಾನುಭೂತಿಯುಳ್ಳ ಸಂಗಾತಿಗಾಗಿ ನಾನು ಹುಡುಕುತ್ತಿದ್ದೇನೆ ಎಂದೂ ಬರೆದೆ. ನಿತ್ಯ ನನ್ನ ಅಕೌಂಟ್ ತೆರೆದಾಗ ಹುಡುಗರ ಒಂದು ಗುಂಪು ಪ್ರೊಫೈಲ್ ಪಿಕ್ಚರ್‌ನೊಂದಿಗೆ ಪಾಪ್‌ಅಪ್ ಆಗುತ್ತಿತ್ತು.

ನಾನು ಇಬ್ಬರೊಂದಿಗೆ ಮಾತುಕತೆ ಮುಂದುವರೆಸುತ್ತಿದ್ದೆ; ಅಕಸ್ಮಾತ್ ಅದೊಂದು ದಿನ ನನಗೆ ಮೊಮ್ಬಾಸಾದ ನನ್ನ ಹಳೆಯ ಗೆಳತಿ ಮಾರ್ಯಾಳ ಫೇಸ್‌ಬುಕ್ ಸಂದೇಶ ಸಿಕ್ಕಿತು; 'ನಾನು ನನ್ನ ಪತಿ ಮೈಕೇಲ್‌ನೊಂದಿಗೆ ಕೋಪನ್‌ಹೇಗನ್ ಪ್ರವಾಸಕ್ಕೆ ಬಂದಿದ್ದೇನೆ, ನಾವಿಬ್ಬರೂ ಮಿತ್ರರೊಬ್ಬರ